36

## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\6153\2020\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 01/09/2021

### ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಶ್ರೀ.ಆರ್.ಕೆ.ಚಿದಾನಂದ ಸ್ವಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಂತರಸಂತೆ ಗ್ರಾಮ ಪಂಚಾಯತ್, ಹೆಚ್.ಡಿ.ಕೋಟೆ ತಾಲ್ಲೂಕ್, ಮೈಸೂರು ಜಿಲ್ಲೆ ರವರ ಕರ್ತವ್ಯ ಲೋಪದ ಬಗ್ಗೆ.

**********

ಮೈಸೂರು ವಿದ್ಯಾರಣ್ಯಪುರಂ ಎಸ್.ಜಿ.ಹೆಚ್ ರಸ್ತೆ ಮನೆ ನಂ.1125/4 ನಿವಾಸಿಯಾದ ಶ್ರೀಮತಿ.ಹಿಫ್ಜಾ ಬೀ ಕೋಂ ಲೇಟ್.ಬಿ.ಅಫ್ತಾಬ್ ಅಹಮ್ಮದ್ (ಇನ್ನು ಮುಂದೆ, 'ಫಿರ್ಯಾದಿದಾರರು' ಎಂದು ಕರೆಯಲ್ಪಡುತ್ತಾರೆ) ರವರು ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕ್ ಅಂತರಸಂತೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಆರ್.ಕೆ.ಚಿದಾನಂದ ಸ್ವಾಮಿ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಮೈಸೂರಿನ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದ ಒ.ಎಸ್.ನಂ.20/1974 ಮತ್ತು ಎಫ್.ಡಿ.ಪಿ ನಂ.27/1989 ನೇದರ ಡಿಕ್ರಿ ಪ್ರಕಾರ ಅಂತರಸಂತೆ ಗ್ರಾಮದ ಆಸ್ತಿ ನಂ.380 ನೇದರಲ್ಲಿ 40X35 ಅಡಿ ವಿಸ್ತೀರ್ಣದ ಆಸ್ತಿಯು ಫಿರ್ಯಾದಿದಾರರ ಹಿಸ್ಸೆಗೆ ಬಂದಿದೆ. ಆ ಪ್ರಕಾರ ಫಿರ್ಯಾದಿದಾರರು ಸದರಿ ಆಸ್ತಿಗೆ ಸಂಬಂಧವಾಗಿ ಖಾತಾ ಬದಲಾವಣೆಗಾಗಿ ದಿನಾಂಕ:28/08/2019 ರಂದು ಎದುರುದಾರರಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಅರ್ಜಿಯನ್ನು ಕೊಟ್ಟಿದ್ದಾರೆ. ಆದರೆ, ಎದುರುದಾರರು ಖಾತಾ ಬದಲಾವಣೆ ಮಾಡದೇ ಅನುಚಿತ ವಿಳಂಬ ಮಾಡಿದ್ದಾರೆ. ಈ ಬಗ್ಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ದೂರು ನೀಡಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಎದುರುದಾರರಾದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಒಂದಲ್ಲ ಒಂದು ನೆಪವೊಡ್ಡಿ

ಖಾತಾ ಬದಲಾವಣೆಯ ಪ್ರಕ್ರಿಯೆಯನ್ನು ವಿಳಂಬ ಮಾಡಿ ಫಿರ್ಯಾದಿದಾರರಿಗೆ ತೊಂದರೆ ಕೊಡುತ್ತಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಕೆಳಗಿನಂತೆ ಹೇಳಿದ್ದಾರೆ -

ಮೈಸೂರು ಹಿರಿಯ ಸಿವಿಲ್ ನ್ಯಾಯಾಲಯದ ಅಸಲು ದಾವಾ ಸಂಖ್ಯೆ:20/1974 ಮತ್ತು ಎಫ್.ಡಿ.ಪಿ ನಂ.27/1989 ನೇದರ ಡಿಕ್ರಿಯ ಮೇರೆಗೆ ಫಿರ್ಯಾದಿಗಾರರು ಅಂತರಸಂತೆ ಗ್ರಾಮದ ನಿವೇಶನ ಸಂಖ್ಯೆ:380ರ ವಿಸ್ತೀರ್ಣ 40x35 ಅಡಿ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಮಾಡಲು ದಿನಾಂಕ:28/08/2019ರಂದು ಮನವಿ ಅರ್ಜಿ ನೀಡಿರುವುದು ಸರಿಯಿದೆ. ಅದೇ ರೀತಿ, ಫಿರ್ಯಾದಿದಾರರು ಎದುರುದಾರರಿಗೆ ದೂರವಾಣಿ ಮೂಲಕ ಮತ್ತು ಫಿರ್ಯಾದಿದಾರರ ಸಂಬಂಧಿಕರು ಕಛೇರಿಗೆ ಭೇಟಿ ನೀಡಿ ಫಿರ್ಯಾದಿದಾರರು ಸಲ್ಲಿಸಿದ ಖಾತಾ ಬದಲಾವಣೆಯ ಅರ್ಜಿಯ ವಿಚಾರಣಾ ಹಂತದ ಬಗ್ಗೆ ಮಾಹಿತಿ ಕೇಳಿದ್ದು ಸರಿ ಇದೆ. ಫಿರ್ಯಾದಿಗಾರರು ಆಸ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶದ ಪ್ರತಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಎದುರುದಾರರು ಮೌಖಿಕವಾಗಿ ಫಿರ್ಯಾದಿದಾರರಿಗೆ ಮತ್ತು ಅವರ ಪರವಾಗಿ ಕಛೇರಿಗೆ ಬಂದ ವ್ಯಕ್ತಿಗಳಿಗೆ ಅಗತ್ಯ ದಾಖಲೆಗಳನ್ನು ಮತ್ತು ಆಸ್ತಿಯ ಫೋಟೋ ಸಲ್ಲಿಸುವಂತೆ ಹಾಗೂ ಸ್ಥಳ ಪರಿಶೀಲನೆಗೆ ಬರುವಂತೆ ತಿಳಿಸಿದ್ದರೂ ಸಹ ಫಿರ್ಯಾದಿದಾರರು ಯಾವುದೇ ಕ್ರಮ ಕೈಗೊಂಡಿಲ್ಲವಾದ್ದರಿಂದ ಹಾಗೂ ಹಕ್ಕು ಬದಲಾವಣೆ ಕೋರಿದ ಆಸ್ತಿಯ ಬಗ್ಗೆ ಅಸ್ಪಷ್ಟತೆ ಇದ್ದುದ್ದರಿಂದ, ಫಿರ್ಯಾದಿದಾರರು ಸಲ್ಲಿಸಿದ ಮನವಿ ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಿಲ್ಲ. ಫಿರ್ಯಾದಿದಾರರು ಹಕ್ಕು ಬದಲಾವಣೆಗೆ ಸಲ್ಲಿಸಿದ ಅರ್ಜಿಯ ಬಗ್ಗೆ ಸಂಶಯ ಬಂದಿದ್ದರಿಂದ ಎದುರುದಾರರು ತಮ್ಮ ಕಛೇರಿಯ ವಹಿಗಳನ್ನು ಪರಿಶೀಲಿಸಲಾಗಿ, ಜಂಜರ್ ಸಂಖ್ಯೆ:430 ಅಸೆಸ್‌ಮೆಂಟ್ ಸಂಖ್ಯೆ:380ರ ಆಸ್ತಿಗೆ ಶ್ರೀ.ಎನ್.ಪಿ.ಗೋಪಾಲ್ ಇವರ ಹೆಸರು ಮಾಲೀಕರೆಂದು ಇರುವ ಬಗ್ಗೆ ಹಾಗೂ ಜಂಜರ್ ಸಂಖ್ಯೆ:380 ಅಸೆಸ್‌ಮೆಂಟ್ ಸಂಖ್ಯೆ:340ರ ಆಸ್ತಿಗೆ ಶ್ರೀ.ಸಂಷದ್ ಇವರ ಹೆಸರು ಮಾಲೀಕರೆಂದು ನಮೂದು ಇರುವ ಬಗ್ಗೆ ಕಂಡು ಬಂದಿದೆ. ಈ ವಿಷಯದ ಬಗ್ಗೆ ಪಂಚಾಯತ್ ಕಛೇರಿಗೆ ಬರುತ್ತಿದ್ದ ಫಿರ್ಯಾದಿದಾರರ ಜನರಿಗೆ ವಿಚಾರಿಸಿದಾಗ, ಅವರು ಅಸಮಂಜಸ ಉತ್ತರಗಳನ್ನು ನೀಡುತ್ತಾ ಬಂದಿದ್ದಾರೆ. ಈವರೆಗೂ ಒಂದು ಬಾರಿಯೂ ಸಹ ಫಿರ್ಯಾದಿದಾರರು ಪಂಚಾಯತ್ ಕಛೇರಿಗೆ ಖುದ್ದು ಭೇಟಿ ನೀಡಿಲ್ಲ. ಒಂದು ವೇಳೆ ಅರ್ಜಿದಾರರು ಖುದ್ದಾಗಿ ಕಛೇರಿಗೆ ಬಂದು ಸ್ಥಳವನ್ನು ಗುರುತಿಸಿದ ಪಕ್ಷದಲ್ಲಿ ಸ್ಥಳ

ಮಹಜರಿನ ಅನ್ವಯ ಖಾತೆ ಬದಲಾವಣೆ ಮಾಡಿಕೊಡಲಾಗುವುದು. ಫಿರ್ಯಾದಿದಾರರು ಎದುರುದಾರರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿದ್ದಾರೆ. ಆದ್ದರಿಂದ, ಎದುರುದಾರರಿಗೆ ಫಿರ್ಯಾದಿದಾರರು ಮಾಡಿದ ಆಪಾದನೆಗಳಿಂದ ಕೈಬಿಡಲು ವಿನಂತಿ.

4. ಎದುರುದಾರರ ಆಕ್ಷೇಪಣೆಗೆ ಪ್ರತ್ಯುತ್ತರವನ್ನು ಸಲ್ಲಿಸಲು ಫಿರ್ಯಾದಿದಾರರಿಗೆ ಹೊರಡಿಸಿದ ನೋಟೀಸ್ ಜಾರಿಯಾಗಿದ್ದರೂ ಸಹ, ಫಿರ್ಯಾದಿದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದೆ.

1) ಅಸಲು ದಾವಾ ಸಂಖ್ಯೆ:20/1974 ಮತ್ತು ಎಫ್.ಡಿ.ಪಿ ನಂ.27/1989 ನೇದವುಗಳಲ್ಲಿ ಆದ ಡಿಕ್ರಿಯ ಪ್ರಕಾರ ಫಿರ್ಯಾದಿದಾರರು ತಮ್ಮ ಹಿಸ್ಸೆಗೆ ಬಂದ ಅಂತರಸಂತೆ ಗ್ರಾಮದ ನಿವೇಶನ ಸಂಖ್ಯೆ:380ರ ವಿಸ್ತೀರ್ಣ 40x34 ಅಡಿ ಜಾಗೆಗೆ ಸಂಬಂಧವಾಗಿ ಹಕ್ಕು ಬದಲಾವಣೆ ಕೋರಿ ಫಿರ್ಯಾದಿದಾರರು ಎದುರುದಾರರಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ದಿನಾಂಕ:28/08/2019 ರಂದು ಅರ್ಜಿ ಸಲ್ಲಿಸಿದ್ದಾರೆ. ಎದುರುದಾರರು ಫಿರ್ಯಾದಿದಾರರ ಅರ್ಜಿಯ ಮೇಲೆ ಕ್ರಮ ಕೈಗೊಳ್ಳದೇ ಇದ್ದುದ್ದರಿಂದ, ಫಿರ್ಯಾದಿದಾರರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ: 06/12/2019 ರಂದು ದೂರು ಮನವಿ ಸಲ್ಲಿಸಿದ್ದಾರೆ. ಅದೇ ರೀತಿ, ಈವರೆಗೂ ಫಿರ್ಯಾದಿದಾರರು ಸಲ್ಲಿಸಿದ ಖಾತಾ ಬದಲಾವಣೆಯ ಅರ್ಜಿಯು ವಿಲೇವಾರಿಯಾಗದೇ ಉಳಿದಿದೆ;

2) ಎಫ್.ಡಿ.ಪಿ ನಂ.27/1989 ನೇದರಲ್ಲಿ ಆದ ಅಂತಿಮ ಡಿಕ್ರಿಯ ಪುಟ ಸಂಖ್ಯೆ:9ರ ಪ್ರಕಾರ ಮ್ಯಾಪ್ ನಂ.3ರಲ್ಲಿ EFGH ಅಕ್ಷರಗಳಿಂದ ತೋರಿಸಿದ ಅಂತರಸಂತೆ ಗ್ರಾಮದ 40 x 34 ಅಡಿ ಜಾಗೆಯು ಫಿರ್ಯಾದಿದಾರರ ಹಿಸ್ಸೆಗೆ ಬಂದಿರುವುದು ಕಂಡು ಬಂದಿದೆ;

3) ಫಿರ್ಯಾದಿದಾರರು ದಿನಾಂಕ 28/08/2019 ರಂದು ಖಾತಾ ಬದಲಾವಣೆ ಕೋರಿ ಎದುರುದಾರರಿಗೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಅದೇ ರೀತಿ, ಫಿರ್ಯಾದಿದಾರರು ತಮ್ಮ ಖಾತಾ ಬದಲಾವಣೆ ಅರ್ಜಿಯ ಮೇಲೆ ಎದುರುದಾರರು ಯಾವುದೇ ಕ್ರಮ ಜರುಗಿಸುತ್ತಿಲ್ಲವೆಂದು ಆಪಾದಿಸಿ ದಿನಾಂಕ 03/12/2019 ರಂದು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ. ಅದೇ ರೀತಿ, ಫಿರ್ಯಾದಿದಾರರ ಮತ್ತು ಇತರರ ದೂರು ಮನವಿಗಳ ಮೇಲೆ ಕ್ರಮ ಜರುಗಿಸಲು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ದಿನಾಂಕ 06/12/2019 ರಂದು ತಾಲ್ಲೂಕ್ ಪಂಚಾಯಿತಿಯ

ಕಾರ್ಯನಿರ್ವಹಣಾಧಿಕಾರಿಗಳಿಗೆ ಪತ್ರವನ್ನು ಬರೆದಿದ್ದಾರೆ. ಅದೇ ರೀತಿ, ಫಿರ್ಯಾದಿದಾರರು ದಿನಾಂಕ 09/03/2020 ರಂದು ಈ ಸಂಸ್ಥೆಗೆ ಎದುರುದಾರರ ವಿರುದ್ಧ ಪ್ರಸ್ತುತ ಈ ದೂರನ್ನು ದಾಖಲಿಸಿದ್ದಾರೆ. ಫಿರ್ಯಾದಿದಾರರು ತಾವು ಹಕ್ಕು ಬದಲಾವಣೆಗಾಗಿ ಎದುರುದಾರರಿಗೆ ಅರ್ಜಿ ಸಲ್ಲಿಸಿದ ಸುಮಾರು ಆರು ತಿಂಗಳುಗಳ ಬಳಿಕ ಈ ದೂರನ್ನು ದಾಖಲಿಸಿದ್ದಾರೆ;

4) ಫಿರ್ಯಾದಿದಾರರ ಪ್ರಕಾರ, ತಮಗೆ ಎದುರುದಾರರು ಪ್ರತಿ ಸಲ ನೆಟ್‌ವರ್ಕ್ ಇರುವುದಿಲ್ಲ, ಕಂಪ್ಯೂಟರ್ ಆಪರೇಟರ್ ಇರುವುದಿಲ್ಲ ಎಂಬ ಇತ್ಯಾದಿ ನೆಪ ಹೇಳಿ ಎಂಟು ದಿನಗಳ ಬಳಿಕ ಕಛೇರಿಗೆ ಬರುವಂತೆ ಹೇಳಿ ತಮ್ಮ ಖಾತಾ ಬದಲಾವಣೆಯ ಅರ್ಜಿಯನ್ನು ವಿಲೇ ಮಾಡದೇ ಮತ್ತು ಅನುಚಿತ ವಿಳಂಬ ಮಾಡಿ ತೊಂದರೆ ನೀಡುತ್ತಿದ್ದಾರೆಂದು ಹೇಳಿದ್ದಾರೆ;

5) ಎದುರುದಾರರ ಪ್ರಕಾರ, ಫಿರ್ಯಾದಿದಾರರು ಕೇವಲ ನ್ಯಾಯಾಲಯದ ಆದೇಶದ ಪ್ರತಿಯನ್ನು ಹೊರತುಪಡಿಸಿ, ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದು, ಹಾಗೂ ತಾವು ಫಿರ್ಯಾದಿದಾರರಿಗೆ ಮತ್ತು ಅವರ ಪರವಾಗಿ ಕಛೇರಿಗೆ ಬಂದ ಜನರಿಗೆ ಪೂರಕ ದಾಖಲೆಗಳನ್ನು ಹಾಜರುಪಡಿಸುವಂತೆ ಮತ್ತು ಸ್ಥಳ ಪರಿಶೀಲನೆಗೆ ಬರುವಂತೆ ತಿಳಿಸಿದ್ದರೂ ಸಹ ಫಿರ್ಯಾದಿದಾರರು ದಾಖಲೆಗಳನ್ನು ಹಾಜರುಪಡಿಸದೇ ಇದ್ದುದ್ದರಿಂದ ಮತ್ತು ಸ್ಥಳ ಪರಿಶೀಲನೆಗೆ ಬರದೇ ಇದ್ದುದ್ದರಿಂದ ಅವರ ಅರ್ಜಿಯನ್ನು ವಿಲೇ ಮಾಡಿಲ್ಲವೆಂದು ಹೇಳಿದ್ದಾರೆ;

6) ಎದುರುದಾರರು ಫಿರ್ಯಾದಿದಾರರಿಂದ ಹಕ್ಕು ಬದಲಾವಣೆಗಾಗಿ ಅರ್ಜಿಯನ್ನು ಸ್ವೀಕರಿಸಿದ ಬಳಿಕ ಎದುರುದಾರರು ಅದನ್ನು ಪರಿಶೀಲಿಸಿ ಫಿರ್ಯಾದಿದಾರರು ಅರ್ಜಿಯೊಂದಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇದ್ದಿದ್ದರೆ ಮತ್ತು ಆಸ್ತಿಯ ಬಗ್ಗೆ ಅಸ್ಪಷ್ಟತೆ ಇದ್ದಿದ್ದರೆ ಎದುರುದಾರರು ಅಗತ್ಯ ದಾಖಲೆಗಳನ್ನು ಹಾಜರುಪಡಿಸುವಂತೆ ಮತ್ತು ಆಸ್ತಿಯ ಬಗ್ಗೆ ಸ್ಪಷ್ಟತೆಯನ್ನು ನೀಡುವಂತೆ ಯುಕ್ತ ಅವಧಿಯಲ್ಲಿ ಫಿರ್ಯಾದಿದಾರರಿಗೆ ಬರವಣಿಗೆಯಲ್ಲಿ ನೋಟೀಸ್ ಕೊಡಬೇಕಾಗುತ್ತದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಎಲ್ಲಿಯೂ ಸಹ ತಾವು ಫಿರ್ಯಾದಿದಾರರಿಗೆ ಬರವಣಿಗೆಯಲ್ಲಿ ನೋಟೀಸ್ ಕೊಟ್ಟಿರುವ ಬಗ್ಗೆ ಉಲ್ಲೇಖಿಸಿಲ್ಲ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾವು ಕೇವಲ ಮೌಖಿಕವಾಗಿ ಮಾತ್ರ ಫಿರ್ಯಾದಿದಾರರಿಗೆ ಮತ್ತು ಅವರ ಪರವಾಗಿ ಕಛೇರಿಗೆ ಬಂದ ಜನರಿಗೆ ದಾಖಲೆಗಳನ್ನು ಹಾಜರುಪಡಿಸುವಂತೆ ಮತ್ತು ಸ್ಥಳ ಪರಿಶೀಲನೆಗೆ ಬರುವಂತೆ ತಿಳಿಸಿರುವ ಬಗ್ಗೆ ಉಲ್ಲೇಖಿಸಿದ್ದಾರೆ. ಇದರಿಂದ, ಎದುರುದಾರರು ಫಿರ್ಯಾದಿದಾರರಿಗೆ ದಾಖಲೆಗಳನ್ನು ಹಾಜರುಪಡಿಸುವಂತೆ ಅಥವಾ ಸ್ಥಳ ಪರಿಶೀಲನೆಗೆ ಬರುವಂತೆ ಬರವಣಿಗೆಯಲ್ಲಿ ಯಾವುದೇ ನೋಟೀಸ್ ನೀಡಿಲ್ಲ ಎನ್ನುವುದು ಸ್ಪಷ್ಟವಾಗಿ ಋಜುವಾತಾಗುತ್ತದೆ. ಒಂದು ವೇಳೆ, ಮೌಖಿಕ ಸೂಚನೆಯ ಮೇರೆಗೆ ಫಿರ್ಯಾದಿದಾರರು ದಾಖಲೆಗಳನ್ನು ಹಾಜರುಪಡಿಸದೇ ಇದ್ದಿದ್ದರೆ ಮತ್ತು ಸ್ಥಳ ಪರಿಶೀಲನೆಗೆ ಬರದೇ ಇದ್ದಿದ್ದರೆ

ಎದುರುದಾರರು ಬರವಣಿಗೆಯಲ್ಲಿ ಫಿರ್ಯಾದಿದಾರರಿಗೆ ನೋಟೀಸ್ ನೀಡಬಹುದಾಗಿತ್ತು. ಸದರಿ ಬರವಣಿಗೆಯ ನೋಟೀಸ್ ನೀಡಲು ತಮಗೆ ಯಾವ ತೊಂದರೆ ಇತ್ತು ಎನ್ನುವುದರ ಬಗ್ಗೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ವಿವರಿಸಿಲ್ಲ. ಫಿರ್ಯಾದಿದಾರರ ಮತ್ತು ಇತರರ ದೂರು ಮನವಿಗಳ ಮೇಲೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕ್ ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಪತ್ರ ಬರೆದ ಬಳಿಕವೂ ಸಹ ಎದುರುದಾರರು ಫಿರ್ಯಾದಿದಾರರೊಂದಿಗೆ ಯಾವುದೇ ರೀತಿಯ ಪತ್ರ ವ್ಯವಹಾರ ಮಾಡದೇ ಇರುವ ವಿಷಯ ಸ್ಪಷ್ಟವಾಗಿ ರುಜುವಾತಾಗುತ್ತದೆ. ಪ್ರಕರಣದ ಸನ್ನಿವೇಶಗಳಿಂದ, ಎದುರುದಾರರು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ತಾವು ಮೌಖಿಕವಾಗಿ ಫಿರ್ಯಾದಿದಾರರಿಗೆ ಮತ್ತು ಅವರ ಸಂಬಂಧಿಕರಿಗೆ ದಾಖಲೆಗಳನ್ನು ಹಾಜರುಪಡಿಸುವಂತೆ ಹಾಗೂ ಸ್ಥಳ ಪರಿಶೀಲನೆಗೆ ಬರುವಂತೆ ಸೂಚಿಸಿರುವ ಬಗ್ಗೆ ಸುಳ್ಳು ವಾದ ಮಂಡಿಸುತ್ತಿದ್ದಾರೆಂದು ಮೇಲ್ನೋಟಕ್ಕೆ ಕಂಡು ಬಂದಿದೆ;

7) ಫಿರ್ಯಾದಿದಾರರು ಹಕ್ಕು ಬದಲಾವಣೆಗೆ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ, ಅಗತ್ಯ ದಾಖಲೆಗಳನ್ನು ಪಡೆದು ನಿಯಮಾನುಸಾರ ಸೂಕ್ತ ಆದೇಶ ಮಾಡುವುದರ ಮೂಲಕ ಅರ್ಜಿಯನ್ನು ವಿಲೇ ಮಾಡುವುದು ಎದುರುದಾರರ ಕರ್ತವ್ಯವಾಗಿದೆ. ಆದರೆ, ಎದುರುದಾರರು ಫಿರ್ಯಾದಿದಾರರ ಅರ್ಜಿಯನ್ನು ಸ್ವೀಕರಿಸಿ ಫಿರ್ಯಾದಿದಾರರೊಂದಿಗೆ ಯಾವುದೇ ಪತ್ರ ವ್ಯವಹಾರ ಮಾಡದೇ ಅವರ ಅರ್ಜಿಯನ್ನು ಯುಕ್ತ ಅವಧಿಯಲ್ಲಿ ವಿಲೇ ಮಾಡದೇ ಇಟ್ಟುಕೊಂಡು ನಿರ್ಲಕ್ಷ್ಯ ವಹಿಸಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

7. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಅದಲ್ಲದೆ, ಎದುರುದಾರರಾದ ಶ್ರೀ.ಆರ್.ಕೆ.ಚಿದಾನಂದ ಸ್ವಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಂತರಸಂತೆ ಗ್ರಾಮ ಪಂಚಾಯತ್, ಹೆಚ್.ಡಿ.ಕೋಟೆ ತಾಲ್ಲೂಕ್, ಮೈಸೂರು ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಸಕ್ಷಮ ಪ್ರಾಧಿಕಾರವನ್ನು ಕೋರಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.